## ಔಷಧೀಯ ಉಪಯೋಗ

- ಮೆಹೆಂದಿಗೆ ತಂಪಿನ ಗುಣವಿದೆ. ಮೆಹೆಂದಿಯನ್ನು ನಿಂಬೆ ರಸದಲ್ಲಿ ಮಿಶ್ರ ಮಾಡಿ ಅಂಗೈ, ಅಂಗಾಲುಗಳಿಗೆ ಲೇಪನ ಮಾಡಿಕೊಂಡರೆ ದೇಹದ ಉಷ್ಣತೆ ಕಡಿಮೆಯಾಗುತ್ತದೆ.
- ಮದುರಂಗಿ ಎಲೆಗಳ ರಸಕ್ಕೆ ಒಂದಿಷ್ಟು ಅರಶಿನಪುಡಿ, ಲಿಂಬೆರಸ ಸೇರಿಸಿ ಮಿಶ್ರಮಾಡಿ ಲೇಪಿಸಿದರೆ ಚಿಬ್ಬು, ಭಂಗು ಇತ್ಯಾದಿ ಕಲೆಗಳು, ಇಸುಬು, ಹುಲಕಡ್ಡಿ ಗುಣವಾಗುತ್ತದೆ.
- ಮೆಹೆಂದಿ ಪುಡಿಗೆ ಒಂದು ಚಮಚ ಬೆಲ್ಲದಪುಡಿ ಇಲ್ಲವೆ ಜೇನು ಸೇರಿಸಿ ಕಣ್ಣಿನ ರೆಪ್ಪೆಯ ಮೇಲಿಟ್ಟು ಮಲಗಿದರೆ ತಲೆನೋವು ಹೋಗುತ್ತದೆ.
- ಮೆಹೆಂದಿ ಪುಡಿಯ ಜೊತೆಗೆ ಬೆಳ್ಳುಳ್ಳಿ, ಮೆಣಸು ನಿಂಬೆ ರಸ ಸೇರಿಸಿ ಅರೆದು ಮುಲಾಮಿನ ರೀತಿ ಹಚ್ಚಿಕೊಂಡರೆ ಉಗುರು ಸುತ್ತು ಹೋಗುತ್ತದೆ.
- ಮದುರಂಗಿಯ ಎಲೆಯ ಕಷಾಯಕ್ಕೆ ಹಾಲು ಸಕ್ಕರೆ ಸೇರಿಸಿ ಒಂದು ತಿಂಗಳು ನಿರಂತರವಾಗಿ ಸೇವಿಸುವುದರಿಂದ ದೇಹದಲ್ಲಿ ಬಲವುಂಟಾಗಿ ರಕ್ತ ಶುದ್ಧಿಯಾಗಿ, ಪಿತ್ತದ ತಲೆನೋವು ಗುಣವಾಗುತ್ತದೆ. ಜೊತೆಗೆ ದೇಹಕ್ಕೆ ಇದರ ಸೇವನೆಯಾಗುವುದರಿಂದ ತಲೆಹೊಟ್ಟು, ರಕ್ತದಲ್ಲಿ ಸಕ್ಕರೆಯ ಅಂಶ ಕಡಿಮೆ ಮಾಡುವಿಕೆ ಹಾಗೂ ಕೊಬ್ಬನ್ನು ಹತೋಟಿಯಲ್ಲಿ ಇಡುವುದಕ್ಕೆ ಇದು ಸಹಾಯಕಾರಿ.
- ಕಾಮಾಲೆ, ಮೂಲವ್ಯಾಧಿ ನಿವಾರಣೆಗೂ ಇದನ್ನು ಬಳಸುವುದಿದೆ. ಇದನ್ನು ಟೀ ಡಿಕಾಕ್ಷನ್, ಮೊಸರು, ನಿಂಬೆಹಣ್ಣಿನ ಜೊತೆ ಬೆರೆಸಿ ತಲೆಗೆ ಹಚ್ಚುವುದರಿಂದ ಬಾಲನರೆ ನಿವಾರಣೆಯಾಗುವುದರ ಜೊತೆಗೆ ತಲೆ ಹೊಟ್ಟು ನಿವಾರಣೆಯಾಗುತ್ತದೆ.
- ಮದುರಂಗಿ ಪುಡಿಗೆ ಕರ್ಪೂರ ಆಲಿವ್ ಆಯಿಲ್ ಇತ್ಯಾದಿ ಸೇರಿಸಿ ತಲೆಗೆ ಹಚ್ಚಿದರೆ ಹೇನು, ಸೀರುಗಳು ಕಡಿಮೆಯಾಗುತ್ತದೆ. ಮಿಗಿಲಾಗಿ ಒಂದೊಳ್ಳೆ ಹೇರ್ ಕಂಡೀಷನರ್ ಆಗಿ ಕೆಲಸ ಮಾಡುತ್ತದೆ.
- ಇದು ಪಿತ್ತಶಾಮಕವಾಗಿ, ಶೀತಹರವಾಗಿ, ಕಫಹರವಾಗಿ ಕೆಲಸ ಮಾಡುತ್ತದೆ.
- ಬಿಳಿ ಕೂದಲನ್ನು ತೋರ್ಪಡಿಸಬಾರದೆಂದು ಈಗ ಎಲ್ಲರೂ ಮೆಹೆಂದಿ ಹಚ್ಚಿಕೊಳ್ಳುತ್ತಾರೆ. ವಾರಾಂತ್ಯದ ಯೋಜನೆಗಳಲ್ಲಿ ಮೆಹೆಂದಿ ಹಾಕಿಕೊಳ್ಳುವುದೂ ಒಂದಾಗಿದೆ. ಕೂದಲು ಕಪ್ಪಾಗಲೆಂದೇ ಕಾಲಾ ಮೆಹೆಂದಿಯೂ ಇದೆ.

ಗಾಢವಾಗುತ್ತದೆ. ಅಲ್ಲದೆ ಮೆಹೆಂದಿ ಹಾಕಿ ಒಂದು ಇಡೀ ದಿನ ಸಾಬೂನು ಬಳಸದೆ ಹೋದಲ್ಲಿ ಹಾಕಿದ ಮೆಹೆಂದಿ ಕೆಲವು ದಿನಗಳವರೆಗೆ ಮಾಯುವುದಿಲ್ಲ. ಮೆಹೆಂದಿಯನ್ನು ಯೂಟ್ಯೂಬ್, ಮೊಬೈಲ್ ಆಪ್‌ಗಳನ್ನು ನೋಡಿ ಹಾಕಿಕೊಳ್ಳುವುದಿದೆ. ಇತ್ತೀಚಿನ ದಿನಗಳಲ್ಲಿ ಮೆಹೆಂದಿಗೆ ಪರ್ಯಾಯವಾಗಿ ಬಾಡಿ ಪೇಂಟಿಂಗ್, ತಾತ್ಕಾಲಿಕ ಟ್ಯಾಟುಗಳನ್ನು ಹಾಕಿಸಿಕೊಳ್ಳುವುದಿದೆ. ಜಾತ್ರೆ ಪುಣ್ಯ ಕ್ಷೇತ್ರ ಮುಂತಾದ ಕಡೆಗಳಲ್ಲಿ ಮೆಹೆಂದಿಯನ್ನು ಅಚ್ಚಿನ ಮೂಲಕ ಹಾಕುವುದಿದೆ. ಮೆಹೆಂದಿ ಎಂದರೆ ಬರೆ ಕಂದು ಇಲ್ಲವೆ ಗಾಢ ಕೇಸರಿ ಬಣ್ಣದ್ದಲ್ಲಿಲ್ಲ. ಈಗ ಹಸಿರು, ಕೆಂಪು, ನೀಲಿ, ಮೆಜೆಂತ, ಕಪ್ಪು ಮುಂತಾದ ಬಣ್ಣಗಳಲ್ಲೂ ಬಂದಿದೆ. ಪಾರ್ಟಿಗಳಿಗೆ ಗ್ಲಿಟರ್ ಮೆಹೆಂದಿ ಕೂಡ ಬಂದಿದೆ. ಗ್ಲಿಟರ್, ಗಮ್, ಜೆಲ್ ಇತ್ಯಾದಿಗಳನ್ನು ಬಳಸಿ ಇದನ್ನು ಮಾಡಿರುತ್ತಾರೆ. ಅಡುಗೆ ಮನೆಯ ಪರಿಕರಗಳನ್ನು ಇಯರ್ ಬಡ್‌ಗಳನ್ನು ಉಪಯೋಗಿಸಿಕೊಂಡು ಸರಳವಾಗಿ ಸೃಜನಾತ್ಮಕವಾಗಿ ಮೆಹೆಂದಿ ಬಿಡಿಸಿಕೊಳ್ಳುವ ಟ್ರೆಂಡ್ ಇದೆ.

ಭಾರತೀಯ ಪದ್ಧತಿಯ ಮೆಹೆಂದಿಯಲ್ಲಿ ಹಲವಾರು ವಿನ್ಯಾಸಗಳನ್ನು ಕಾಣಬಹುದು. ಮೊದಲಿಗೆ ವೃತ್ತಾಕಾರ ಚಿತ್ರ ಬಿಡಿಸಿಕೊಂಡು ನಂತರ ಚುಕ್ಕಿಗಳಿಂದ ಅಲಂಕರಿಸುವುದು. ಕಡೆಯದಾಗಿ ಮೆಹೆಂದಿಯನ್ನು ಉಂಡೆ ಮಾಡಿ ಉಗುರಿಗೆ ಮೆತ್ತಿಕೊಳ್ಳುವುದು. ನಂತರ ಫ್ರೀ ಹ್ಯಾಂಡ್ ಆಗಿಯೂ ಚಿತ್ರ ಬಿಡಿಸಿಕೊಂಡು ಅದಕ್ಕೆ ಹೊಂದುವ ಕಲರ್ ಹಾಕಿಕೊಳ್ಳುವುದಿದೆ. ಮೆಹೆಂದಿ ಹಾಕಲು ಕಲಿಯಬೇಕೆಂದವರಿಗೆ ಆರ್ಸಲಿಕ್ ಕೈಗಳು ಬಂದಿವೆ. ಅವುಗಳ ಮೇಲೆ ಮೊದಲು ಬಿಡಿಸಿ ಅಭ್ಯಾಸ ಮಾಡಿಕೊಳ್ಳಬಹುದು. ಕಾಲೇಜು, ಮಹಿಳಾ ಸಂಘ ಇನ್ನಿತರ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಮೆಹೆಂದಿ ಬಿಡಿಸುವ ಸ್ಪರ್ಧೆಯೂ ಇರುತ್ತದೆ.

ಮದುವೆಯ ಸಂದರ್ಭದಲ್ಲಿ ಮದುಮಕ್ಕಳಿಗೆ ಹಾಕುವ ಪ್ರಾಕೃತಿಕ ಬಣ್ಣ ಇದು. ಮುತ್ತೈದೆ ಸಂಕೇತವಾಗಿರುವ ಮೆಹೆಂದಿ ಸಂಕೀರ್ಣ ಹಾಗೂ ಸರಳ ರೇಖಾಚಿತ್ರಗಳಿಂದ ಕೂಡಿದ ಚಿತ್ರ ಚಿತ್ತಾರವಾಗಿದೆ. ಹಾಗಾಗಿ 'ಮೆಹೆಂದಿ ಶಾಸ್ತ್ರ' ಎಂದು ಮದುವೆಗೆ ಮುನ್ನ ಸಂತೋಷ ಕೂಟದ ಇನ್ನೊಂದು ಭಾಗವಾಗಿ ಆಚರಿಸುವುದಿದೆ. ಮದುಮಗಳಿಗೆ ಬಂಧುಗಳೆಲ್ಲ ಸೇರಿ ಒಂದಾದರೂ ಚುಕ್ಕಿ ಇಟ್ಟು ಮೆಹೆಂದಿ ಶಾಸ್ತ್ರವನ್ನು ಆರಂಭಿಸುತ್ತಾರೆ. ವಧುವಿನ ಕೈಯಲ್ಲಿ ಮೆಹೆಂದಿ ಬಿಡಿಸುವಾಗ ವರನ ಹೆಸರನ್ನು ಗೊತ್ತಾಗದಂತೆ ಬಿಡಿಸಿ ಮತ್ತೆ ಹುಡುಕಿಸುವುದಿದೆ. ಮೆಹೆಂದಿಯ ಗಾಢತೆ ಸಂತಾನೋತ್ಪತ್ತಿಯ ಶಕ್ತಿಯ ಸಂಕೇತವಾಗಿಯೂ, ವಿವಾಹ ಬಾಂಧವ್ಯ ಹಾಗೂ ಶುಭ ಶಕುನ ಹಾಗೂ ಅನ್ಯೋನ್ಯತೆಯ ಸಂಕೇತವಾಗಿಯೂ ಮಹೆಂದಿ ಇದೆ. ಮೆಹೆಂದಿ ಗಾಢವಾಗಿ ಇದ್ದರೆ ಪ್ರೀತಿಯ ಬಣ್ಣ ಎಂದೂ ಒಂದು ವೇಳೆ ಹಾಕಿದ ಮೆಹೆಂದಿ ಕಪ್ಪು ಬಣ್ಣಕ್ಕೆ ತಿರುಗಿದರೆ ಅತ್ತೆಯ ಜೊತೆಗೆ ವಿರಸ ಎಂಬ ನಂಬಿಕೆ ಇವೆ.

ಮೆಹೆಂದಿ ಹಾಕುವಾಗ ಬಿಡಿಸುವ ಚಿತ್ತಾರಗಳು ಸೂರ್ಯನ ಒಳ ಮೈ ಹಾಗೂ ಹೊರಮೈಯ ಸಂಕೇತ ಎಂದು ಭಾವಿಸಲಾಗುತ್ತದೆ. ಇದು ಧನಾತ್ಮಕತೆಯ ಸಂಕೇತ ಎಂದು ಇಂದಿಗೂ ಕೆಲವರು ಏನಿಲ್ಲದಿದ್ದರೂ ಒಂದು ವೃತ್ತಾಕಾರದ ಚಿತ್ರೆಯನ್ನಾದರೂ ಬಿಡಿಸಿಕೊಳ್ಳುತ್ತಾರೆ. ಮದುಮಗಳಿಗೆ ಮೆಹೆಂದಿ ಹಾಕಿಸುವ ಮುಖ್ಯ ಉದ್ದೇಶವೇನೆಂದರೆ ತವರು ಬಿಡುತ್ತಿರುವ ನೋವನ್ನು ಮರೆಯಲಿ, ಕ್ಷಣಕಾಲವಾದರೂ, ದುಗುಡ ಅಧೈರ್ಯದಿಂದ, ಮಾನಸಿಕ ಒತ್ತಡದಿಂದ ದೂರವಿರಲಿ ಎಂದು. ಮಲೆನಾಡಿನಲ್ಲಿ ನಾಗರಪಂಚಮಿ ಮುಂತಾದ ಹಬ್ಬಗಳಲ್ಲಿ ವೀಳ್ಯದೆಲೆ, ಸುಣ್ಣ ಇತ್ಯಾದಿಗಳ ಜೊತೆ ಸೇರಿ ಇದನ್ನು ಹಾಕಿಕೊಳ್ಳುವುದಿದೆ. ಉತ್ತರ ಭಾರತದಲ್ಲಿ ಮದುವೆಯ ಸಂದರ್ಭದಲ್ಲಿ ವಧುವಿನ ಸಹೋದರನ ಕೈಗೂ ಸ್ವಲ್ಪ ಮೆಹೆಂದಿಯನ್ನು ಅಣ್ಣ ತಂಗಿ ಸಂಬಂಧ ಚೆನ್ನಾಗಿರಲಿ ಎಂಬ ಕಾರಣಕ್ಕೆ ಹಾಕುವುದಿದೆ. ■

## ಮೆಹೆಂದಿ ಹಿಂದಿನ ಕಥೆ

ಯುಗಗಳ ಹಿಂದೆ ಸತ್ಯೇಶ್ವರಿ ಹಾಗೂ ಸತ್ಯೇಶ್ವರ ಎಂಬ ಸಹೋದರ ಸಹೋದರಿಯರು ಇರುತ್ತಾರೆ. ನಾಗರ ಪಂಚಮಿಯ ಹಿಂದಿನ ದಿನ ಸತ್ಯೇಶ್ವರ ಅಕಾಲ ಮೃತ್ಯುವಿಗೀಡಾಗುತ್ತಾನೆ. ದುಃಖಿತಳಾದ ಸಹೋದರಿ ಎದುರಲ್ಲಿ ಮತ್ತೆ ಸತ್ಯೇಶ್ವರ ನಾಗರಾಜನ ರೂಪದಲ್ಲಿ ಬಂದು ನಿಲ್ಲುತ್ತಾನೆ. ಸಂತೋಷದಿಂದ ಉಭಯಕುಶಲೋಪರಿ ನಡೆದ ಬಳಿಕ ಸತ್ಯೇಶ್ವರ ಹೊರಡುವ ಸಂದರ್ಭದಲ್ಲಿ ಸತ್ಯೇಶ್ವರಿ 'ನೀನು ಮತ್ತೆ ಬಂದೇ ಬರುವೆ ಎಂದು ಭಾಷೆ ನೀಡು' ಎಂದಾಗ ಆತ 'ಭರವಸೆಯಿರಲಿ ಬಂದೇ ಬರುವೆ' ಎಂದು ಭಾಷೆ ನೀಡುತ್ತಾನೆ. ಆ ಭಾಷೆಯೇ ಚಿಹ್ನೆಯ ರೂಪದಲ್ಲಿ ಸತ್ಯೇಶ್ವರಿಯ ಕೈಯಲ್ಲಿ ಹಾಗೆ ಉಳಿದು ಬಿಡುತ್ತದೆ. ಅಂದಿನಿಂದ ಮೆಹೆಂದಿ ಬಿಡಿಸಿಕೊಳ್ಳುವ ಪರಿಪಾಠ ಬಂದಿತು.

